# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 861

2) ಮಾನ್ಯ ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್.
(ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 13.03.2025

4) ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿಜಯಪುರ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ನಿರುಪಯುಕ್ತವಾದ ವಾಹನಗಳ ಸಂಖ್ಯೆ ಎಷ್ಟು; ಎಷ್ಟು ನೂತನ ವಾಹನಗಳನ್ನು ಒದಗಿಸಲಾಗಿದೆ;(ಸಂಪೂರ್ಣ ಮಾಹಿತಿ ನೀಡುವುದು)</td><td>ವಿಜಯಪುರ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ನಿರುಪಯುಕ್ತವಾದ ವಾಹನಗಳ ವಿವರ:
<table>
<tr><th>ವಿವರ</th><th>2022</th><th>2023</th><th>2024</th><th>ಒಟ್ಟು</th></tr>
<tr><td>4– ಚಕ್ರ ವಾಹನಗಳು</td><td>09</td><td>02</td><td>15</td><td>26</td></tr>
<tr><td>2– ಚಕ್ರ ವಾಹನಗಳು</td><td>07</td><td>02</td><td>45</td><td>54</td></tr>
<tr><td>ಒಟ್ಟು</td><td>16</td><td>04</td><td>60</td><td>80</td></tr>
</table>
ವಿಜಯಪುರ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ನೂತನವಾಗಿ ಒದಗಿಸಲಾದ ವಾಹನಗಳ ವಿವರ:
<table>
<tr><th>ವಿವರ</th><th>2022</th><th>2023</th><th>2024</th><th>ಒಟ್ಟು</th></tr>
<tr><td>4– ಚಕ್ರ ವಾಹನಗಳು</td><td>09</td><td>06</td><td>01</td><td>16</td></tr>
<tr><td>2– ಚಕ್ರ ವಾಹನಗಳು</td><td>02</td><td>20</td><td>–</td><td>22</td></tr>
<tr><td>ಒಟ್ಟು</td><td>11</td><td>26</td><td>01</td><td>38</td></tr>
</table></td></tr>
<tr><td>ಆ)</td><td>ವಿಜಯಪುರ ಜಿಲ್ಲೆಯಲ್ಲಿರುವ ಪೊಲೀಸ್ ಸಿಬ್ಬಂದಿಯ ಸಂಖ್ಯಾ ಬಲವೆಷ್ಟು; ಇದರಲ್ಲಿ ಎಷ್ಟು ಸಿಬ್ಬಂದಿಗಳಿಗೆ ವಸತಿ ಗೃಹದ ವ್ಯವಸ್ಥೆ ಕಲ್ಪಿಸಲಾಗಿದೆ; ಒಟ್ಟು ಸಿಬ್ಬಂದಿಯಲ್ಲಿ ಶೇಕಡಾ ಎಷ್ಟು ಸಿಬ್ಬಂದಿ ವರ್ಗಕ್ಕೆ ವಸತಿ ಗೃಹ ವ್ಯವಸ್ಥೆ ಕಲ್ಪಿಸಲಾಗಿದೆ; (ಸಮಗ್ರ ಮಾಹಿತಿ ಒದಗಿಸುವುದು)</td><td>ವಿಜಯಪುರ ಜಿಲ್ಲೆಯಲ್ಲಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯಾ ಬಲ: 1666 ಇರುತ್ತದೆ. ಇದರಲ್ಲಿ ಒಟ್ಟು 883 ಸಿಬ್ಬಂದಿಗಳಿಗೆ ವಸತಿ ಗೃಹದ ವ್ಯವಸ್ಥೆ ಕಲ್ಪಿಸಲಾಗಿದೆ. ಅಂದರೆ ಶೇಕಡಾ 53% ಸಿಬ್ಬಂದಿ ವರ್ಗಕ್ಕೆ ವಸತಿ ಗೃಹ ವ್ಯವಸ್ಥೆ ಕಲ್ಪಿಸಲಾಗಿದೆ.</td></tr>
</table>

…2

| | | |
|---|---|---|
| ಇ) | ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಶೇಕಡಾವಾರು ಎಷ್ಟು ಪೊಲೀಸ್ ಸಿಬ್ಬಂದಿ ವರ್ಗಕ್ಕೆ ವಸತಿ ಗೃಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ; | ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಶೇಕಡವಾರು ಸುಮಾರು 38% ಪೊಲೀಸ್ ಸಿಬ್ಬಂದಿ ವರ್ಗಕ್ಕೆ ವಸತಿ ಗೃಹ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. |
| ಈ) | ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ; ಎಲ್ಲಾ ಪೊಲೀಸ್ ಠಾಣೆಗಳಿಗೂ ವಾಹನದ ವ್ಯವಸ್ಥೆ ಇದೆಯೇ; ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಪಿಎಸ್‌ಐಗಳಿಗೆ ವಾಹನಗಳನ್ನು ಒದಗಿಸಲಾಗಿದೆಯೇ; (ಮಾಹಿತಿ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ 28 ಪೊಲೀಸ್ ಠಾಣೆಗಳಿರುತ್ತವೆ. ಸದರಿ 28 ಪೊಲೀಸ್ ಠಾಣೆಗಳ ಪೈಕಿ 03 (ಹೂರ್ತಿ, ಕೂಡಗಿ(ಎನ್‌ಟಿಪಿಸಿ), ಆಲಮಟ್ಟಿ) ಪೊಲೀಸ್ ಠಾಣೆಗಳಿಗೆ ವಾಹನದ ವ್ಯವಸ್ಥೆ ಇರುವುದಿಲ್ಲ.<br>ಪೊಲೀಸ್ ಠಾಣೆಗಳಿಗೆ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಪಿಎಸ್‌ಐ ರವರುಗಳಿಗೆ ದ್ವಿ-ಚಕ್ರ ವಾಹನಗಳನ್ನು ಒದಗಿಸಲಾಗಿದೆ. |
| ಉ) | ರಾಜ್ಯದಲ್ಲಿ ಒಟ್ಟು ಎಷ್ಟು ರಾಷ್ಟ್ರೀಯ– ರಾಜ್ಯ ಹೆದ್ದಾರಿಗಳಲ್ಲಿ ವಿಜಯಪುರ ಜಿಲ್ಲೆಯನ್ನು ಒಳಗೊಂಡಂತೆ, ಎಷ್ಟು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ವಹಣೆಗಾಗಿ ಹೈವೆ ಮೊಬೈಲ್‌ಗಳನ್ನು ಒದಗಿಸಲಾಗಿದೆ; ಒಟ್ಟು ಸಂಖ್ಯೆ ಎಷ್ಟು; ವಿಜಯಪುರದ ಸಂಖ್ಯೆ ಎಷ್ಟು? (ಮಾಹಿತಿ ನೀಡುವುದು) | ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಗಸ್ತು ಕರ್ತವ್ಯಕ್ಕಾಗಿ ರಾಜ್ಯದ್ಯಂತ ಒಟ್ಟು 250 ಸಂಖ್ಯೆಯ ಹೆದ್ದಾರಿ ಗಸ್ತು ವಾಹನಗಳನ್ನು ಹಂಚಿಕೆ ಮಾಡಲಾಗಿರುತ್ತದೆ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಒಟ್ಟು 06 ಸಂಖ್ಯೆಯ ಹೆದ್ದಾರಿ ಗಸ್ತು ವಾಹನಗಳನ್ನು ಗಸ್ತು ಕರ್ತವ್ಯಕ್ಕೆ ಒದಗಿಸಲಾಗಿದೆ. |

**ಸಂಖ್ಯೆ: ಹೆಚ್‌ಡಿ 26 ಪಿಬಿಎಲ್ 2025**

**(ಡಾ|| ಜಿ. ಪರಮೇಶ್ವರ)**
ಗೃಹ ಸಚಿವರು